ಪ್ರೇಮಿಯಾಗಿದ್ದು ಎಲ್ಲ ಧಾರವಾಡ ಯೂನಿವರ್ಸಿಟಿಯ ದಿನಗಳಲ್ಲಿ. ಸದಾ ಎಂಎಸ್‌ಡಬ್ಲ್ಯೂ ಮಾಡುತ್ತಿದ್ದಾಗ ಸ್ವಾತಿ ಜರ್ನಲಿಸಂ ಎಂ.ಎ. ಓದುತ್ತಿದ್ದಳು. ಯಾವುದೋ ಅಸೈನ್‌ಮೆಂಟಿಗೆ ಮಾಹಿತಿ ಕಲೆ ಹಾಕಲು ಎಂಎಸ್‌ಡಬ್ಲ್ಯೂ ವಿಭಾಗಕ್ಕೆ ಬಂದವಳನ್ನು ಪರಿಚಯಿಸಿಕೊಂಡು ಒಲಿಸಿಕೊಳ್ಳಲು ಸದಾ ಸಾಕಷ್ಟು ಸರ್ಕಸ್ ಮಾಡಿದ್ದ. ಆ ಸರ್ಕಸ್‌ಗಳೆಲ್ಲ ಯೂನಿವರ್ಸಿಟಿ ರಸ್ತೆ ಬದಿಯಲ್ಲಿ ಬಿರುಬಿಸಿಲಲ್ಲಿ ಮೈದುಂಬಿ ನಿಂತ ಗುಲ್‌ಮೊಹರ್ ಮರದಷ್ಟೇ ವರ್ಣಮಯ ಆನಂದ ನೀಡುತ್ತಿದ್ದ ದಿನಗಳವು. ಬಲಭುಜಕ್ಕೊಂದು ಸೈಡ್ ಬ್ಯಾಗ್ ಸಿಕ್ಕಸಿಕೊಂಡು ಎದೆಗೆ ಒಂದೇ ಒಂದು ಕಿಂಗ್‌ಸೈಜ್ ಪಟ್ಟಿ ಒತ್ತಿಹಿಡಿದುಕೊಂಡು ಬರುತ್ತಿದ್ದವಳ ಕಿರುನಗೆಯಲ್ಲಿ ಜಗತ್ತಿನ ಸುಖಬೀಜಗಳೆಲ್ಲ ಮೊಳಕೆಯೊಡೆದು ಫಲಕೊಡುತ್ತಿದ್ದ, ಅವಳದೊಂದು ಕಿರುಸಿಡುಕಿಗೆ ಎಂಥ ನಂದನವನವೂ ಸ್ಮಶಾನವಾಗುತ್ತಿದ್ದ, ಸದಾ ಅಷ್ಟು ತೀವ್ರವಾಗಿ ಬದುಕುತ್ತಿದ್ದ ದಿನಗಳವು. ಮಾಸ್ಟರ್ ಡಿಗ್ರಿ ಮುಗಿಸಿದ ಸ್ವಾತಿಗೆ ಬೇಗನೇ ಬೆಂಗಳೂರಿನ ಸುದ್ದಿ ಪತ್ರಿಕೆಯೊಂದರಲ್ಲಿ ಕೆಲಸ ಸಿಕ್ಕಿತ್ತು. ಕೆಲಸ ಹುಡುಕುವ ನೆಪದಲ್ಲಿ ಸದಾನೂ ಬೆಂಗಳೂರು ಸೇರಿಕೊಂಡಿದ್ದ.

ಇಂದಿಗೂ ಸ್ವಾತಿಯ ಮುಖವನ್ನು ಮನಸ್ಸಿಗೆ ತಂದುಕೊಳ್ಳಹೊರಟರೆ ಅವನ ಮನಸ್ಸಲ್ಲಿ ಧಾರವಾಡದ ಬಿಸಿಲು ರಸ್ತೆಯಲ್ಲಿ ಒಂಟಿಪಟ್ಟಿ ಎದೆಗೊತ್ತಿಕೊಂಡು ಬರುತ್ತಿರುವ ಚಿತ್ರ ಮೂಡುತ್ತದೆಯೇ ವಿನಾ ಬೆಂಗಳೂರಿನಲ್ಲಿ ಭೇಟಿ ಮಾಡಿದ ಕೊನೆಯ ದಿನದ ಚಹರೆ ಸಿಗುವುದೇ ಇಲ್ಲ.

ಆದರೆ ಕೊನೆಯ ಸಲದ ಭೇಟಿಯಲ್ಲಿ ಅವಳಾಡಿದ ಮಾತಂತೂ ಅದರೆಲ್ಲ ಧ್ವನಿ ಲಯ ಏರಿಳಿತಗಳೊಟ್ಟಿಗೇ ನೆನಪಿವೆ. ಮಲ್ಲೇಶ್ವರದ ಮಂತ್ರಿ ಮಾಲ್ ಎದುರಿನ ಕಟ್ಟಗೆ ಕೈಕೊಟ್ಟು ಎದುರಿನ ರಸ್ತೆಯಲ್ಲಿ ಇಂಚಿಂಚಾಗಿ ಚಲಿಸುತ್ತಿದ್ದ ವಾಹನಗಳನ್ನು ನೋಡುತ್ತಾ ಸಣ್ಣನೆಯ ಧ್ವನಿಯಲ್ಲಿ ಹೇಳಿದ್ದಳು. ಆದರೆ ಸ್ಪಷ್ಟವಾಗಿ ಕೇಳಿಸುವಷ್ಟು ಸನಿಹ ನಿಂತಿದ್ದಳು.

'ಸದಾ... ನಾನು ತುಂಬಾ ಯೋಚಿಸಿದೆ. ಎಮೋಶನ್ಸ್ ನಮ್ಮ ಬದುಕಿನ ಅವಶ್ಯಕತೆಗಳನ್ನು ನೀಗಿಸುವುದಿಲ್ಲ. ಪ್ರಾಕ್ಟಿಕಲ್ ಆಗಿ ಇರೂದು ಮುಖ್ಯ ಅನಿಸ್ತಿದೆ ನಂಗೆ. ನೋಡು, ನಂಗೆ ನನ್ನ ಕೆರಿಯರ್ ಮುಖ್ಯ. ನನ್ನ ಜಾಬ್ ಮುಖ್ಯ. ನಿಂಗೆ ಊರಲ್ಲಿ ಸಾಕಷ್ಟು ಆಸ್ತಿ ಇರಬಹುದು. ಆದ್ರೆ ನಿನ್ನ ಮದುವೆಯಾಗಿ ಆ ಹಳ್ಳಿ ಮನೆಯಲ್ಲಿ ಬಂದು ಇರೂದು ನಂಗೆ ಸಾಧ್ಯವಾಗೂದಿಲ್ಲ. ಅದು ಜೈಲು ನಂಗೆ. ಅಂಥದ್ದೇ ಇನ್ನೊಂದು ಜೈಲಿಂದ ತಪ್ಪಿಸಿಕೊಂಡು ಬಂದವಳು ನಾನು. ತಪ್ಪಿಸಿಕೊಳ್ಳಲಿಕ್ಕೆ ಅಂತಲೇ ಇಲ್ಲಿನ ಬದುಕು ಆರಿಸಿಕೊಂಡವಳು. ಈಗ ಮತ್ತೆ ಅಲ್ಲಿಗೆ ಮರಳೂದು ನನ್ನಿಂದಾಗೂದಿಲ್ಲ. ಹಂಗಂತ ನಿನ್ನ ಲವ್ ಮಾಡಿಲ್ಲ, ಮದ್ವೆ ಆಗೂದೇ ಇಲ್ಲ ಅಂತಲ್ಲ ನಾನು ಹೇಳ್ತಿರೋದು. ಆದ್ರೆ ಅದು ಸಾಧ್ಯ ಆಗಬೇಕು ಅಂದ್ರೆ ನೀನೂ ಬೆಂಗಳೂರಿನಲ್ಲೇ ಇರಬೇಕು. ತಿಂಗಳಿಗೆ ಕನಿಷ್ಠ ಒಂದಿಪ್ಪತ್ತು ಸಾವಿರ ಸಂಪಾದಿಸಲು ಶಕ್ತ ಆಗಬೇಕು. ಆಮೇಲೆ ಮದ್ವೆ ಆಗಿ ಇಲ್ಲೇ ಮನೆ ಮಾಡುವಾ. ಅಲ್ಲಿಯವರೆಗೂ ನಾನು ಕಾಯ್ತೇನೆ. ಅದು ಆಗ್ಲಿಲ್ಲಾ ಅಂದ್ರೆ ನಮ್ಮ ಮದ್ವೆ ಸಾಧ್ಯ ಆಗೂದಿಲ್ಲ. ಎಮೋಷನಲ್ ಆಗ್ಬೇಡ, ಬೀ ಪ್ರಾಕ್ಟಿಕಲ್...' ಒಂದೇ ಸಮನೆ ಮಾತನಾಡುತ್ತಲೇ ಹೋದ ಸ್ವಾತಿಯ ಮುಖವನ್ನು ಬೆರಗಿನಿಂದ ನೋಡಿದ್ದ ಸದಾ. ಅವಳ ಮಾತಿನಲ್ಲಿ ಎರಡು ಮೂರು ಸಲ ಬಂದ 'ಎಮೋಷನಲ್', 'ಪ್ರಾಕ್ಟಿಕಲ್' ಶಬ್ದಗಳೆಲ್ಲ ಸ್ವಾತಿಯ ಧ್ವನಿಯಲ್ಲಿ ಬೇರೆಯದೇ ಜಗತ್ತಿನ ಭಾಷೆಯಂತೇ ವಿಚಿತ್ರವಾಗಿ ಕೇಳಿಸಿದ್ದವು. ಅವಳ ಮುಖದಲ್ಲಿ ದುಃಖದ ಛಾಯೆಯೂ ಇರಲಿಲ್ಲ. ಅವಳ ಕಣ್ಣಂಚು ಕೊಂಚವಾದರೂ ಹಸಿಗೊಳ್ಳಬಹುದೆ ಎಂದು ಕೆಟ್ಟ ಕುತೂಹಲದಲ್ಲಿ ಕಾದ. ಆಗಲಿಲ್ಲ. ಆ ಧ್ವನಿಯಲ್ಲಿ ಆಪ್ತತೆಯ